



ಕುಳಿತಳು. ಅವಳಿಂದ ಊರ ಜನರನ್ನು ಎದುರಿಸಲು ಆಗಲಿಲ್ಲ. ಆಸರೆಯಿಲ್ಲದ ಜೀವಕ್ಕೆ ಆಸರೆಯಾಗುವವರು ಯಾರು ಹೇಳಿ? ಅದೇ ಗೌಡನ ಮಗ ವೆಂಕಟಪ್ಪ ಗೌಡನ ಕಣ್ಣು ಸೇವಂತಿ ಮೇಲೆ ಬಿತ್ತು. ಸೇವಂತಿಯ ದನಿಗೆ ಯಾರೂ ಅನುಕಂಪ ತೋರಲಿಲ್ಲ. ಅವಳು ಜನವಿರೋಧಿ ಮಾತು ಆಡುತ್ತಿರುವಳು ಎಂದು ಬೈಯ್ದರು. ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದರು. ತನ್ನದಲ್ಲದ ತಪ್ಪಿಗೆ ಇವಳು ಗೆಜ್ಜೆಪೂಜೆ ಮಾಡಿಸಿಕೊಂಡಳು. ಹೀಗೆ ಇವಳ ಜೀವನವು ಯಾರೂ ಇಲ್ಲದ ಮನೆಯಲ್ಲಿ ಕತ್ತಲಲ್ಲೇ ಬೇಕು, ಬೇಡವನ್ನು ತೀರಿಸಿಕೊಳ್ಳುವ ವ್ಯಕ್ತಿಯ ಜೊತೆ ಸಂಸಾರ ಶುರುವಾಗಿತ್ತು. ಅವನಿಗೂ ಇವಳ ಮೇಲೆ ಒಲವು. ಪ್ರೀತಿಸಿ, ಮೋಹಿಸಿ ಅವಳನ್ನು ತನ್ನವಳನ್ನಾಗಿ ಮಾಡಿಕೊಂಡಿದ್ದ, ಅದೂ ಅಕ್ರಮವಾಗಿ. ವೆಂಕಟಪ್ಪ ಗೌಡನ ಮನೆಯ ಎದುರಿನ ಓಣಿಯಲ್ಲಿ ವಾಸವಿದ್ದ ನಾಗಪ್ಪ ದೇಸಾಯಿಯ ಕಣ್ಣು ಸೇವಂತಿ ಮೇಲೆ ಬಿತ್ತು. ಪಂಚಾಯಿತಿ ಕರೆದ. 'ಸೇವಂತಿ ನಿನ್ನ ಸ್ವತ್ತಲ್ಲ. ಆರು ತಿಂಗಳು ನೀನು ಇಟ್ಟುಕೋ, ಆರು ತಿಂಗಳು ನಾನು ಇಟ್ಟುಕೊಳ್ಳುವೆ' ಎಂದು ಜಗಳವಾಡತೊಡಗಿದ್ದ. ನಾಗಪ್ಪ ದೇಸಾಯಿ ಊರಿನಲ್ಲಿ ಪ್ರತಿಷ್ಠಿತ ವ್ಯಕ್ತಿ. ಅವನ ಮಾತಿಗೆ ಯಾರೂ ಪ್ರತಿ ಆಡಲಿಲ್ಲ. ಆ ದಿನ ಅವಳು ಮನಸ್ಸಿನಲ್ಲಿ ಅತ್ತು ಹೊರಗಡೆ ನಕ್ಕಳು. ವಿಧಿಯ ಆಟವೇ? ಹಣೆ ಬರಹವೇ? ದೇವರೂ ಹೀಗೂ ಪರೀಕ್ಷೆ ಮಾಡ್ತಾನಾ? ಎಂದು ಯೋಚಿಸಿ ಸುಮ್ಮನೆ ಕುಳಿತಿದ್ದಳು. ರಾತ್ರಿ ಹನ್ನೆರಡರ ಸಮಯ ಬಾಗಿಲು ಸಪ್ಪಳವಾಯ್ತು. ನಿಶ್ಶಬ್ದ ವಾತಾವಾರಣ. ಯಾರಾದರೂ ಕೇಳಿಸಿಕೊಂಡು ಹೊರಬಂದರೆ ಎಂದು ಇವಳೇ ಹೋಗಿ ಬಾಗಿಲು ತೆಗೆದಳು. ವೆಂಕಟಪ್ಪ ಗೌಡನೇ ಬಂದಿದ್ದ. ಥಟ್ಟನೇ ಬಾಗಿಲು ಮುಚ್ಚಿದಳು.

'ಗೌಡರೇ ಯಾಕೆ ಹೀಗೆ ನಡುರಾತ್ರಿಯಲ್ಲಿ ಬಂದಿರುವಿರಿ. ನಿದ್ದೆ ಬಂದಿಲ್ಲವೆ?' ಎಂದಳು.

'ಇಲ್ಲ ಸೇವಂತಿ. ಅದು... ನಿನಗೊಂದು ಮಾತು ಹೇಳಬೇಕಿತ್ತು. ಅದಕ್ಕೆ ಬಂದೆ. ನೀನು ನನ್ನ ಒಂದು ಮಾತನ್ನು ನಡೆಸಿಕೊಡುತ್ತೀಯಾ?' ಎಂದರು.

'ಸರಿ ಅದೇನು ಹೇಳಿ, ನನ್ನಿಂದ ಆಗುವುದಾದರೆ ಖಂಡಿತಾ ನಡೆಸಿಕೊಡುವೆ' ಎಂದಳು.

'ಅದು ನಿನಗೆ ಗೊತ್ತು. ಮೊನ್ನೆ ಪಂಚಾಯಿತಿವರೆಗೂ ಬಂದ ನಾಗಪ್ಪ ದೇಸಾಯಿಗೆ ನಿನ್ನ ಮೇಲೆ ಆಸೆ ಶುರುವಾಗಿದೆ. ಅದಕ್ಕೆ... ನೀನು ಕಾಮುಕರ ಪಾಲಾಗುವುದನ್ನು ನೋಡಿಕೊಂಡು ಕೂಡಲು ನನ್ನಿಂದ ಆಗದು. ಅದಕ್ಕೆ ನೀನು, ಈ ಊರು ಬಿಟ್ಟು ಸ್ವಲ್ಪ ದಿನ ದೂರವಿರು' ಎಂದು ಕೈಯಲ್ಲಿದ್ದ ಹಣವನ್ನು ತಗೋ ಎಂದು ಕೊಡಲು ಬಂದರು.

ಆಗಲೇ ಅವಳ ಹೊಟ್ಟೆಯಲ್ಲಿ ಗೌಡರ ವಂಶದ ಕುಡಿ ಬೆಳೆಯುತ್ತಿತ್ತು. ಐದು ತಿಂಗಳಾಗಿತ್ತು. ಈ ವಿಷಯ ಹೇಳಿದರೆ ಕೂಸನ್ನು ಹೊಟ್ಟೆಯಲ್ಲೇ ಸಾಯಿಸುವರು. ಅದಕ್ಕೆಂದೇ ತನ್ನ ಮಗುವಿನ ರಕ್ಷಣೆಗೆ ಅವಳು ಊರು ಬಿಡುವ ನಿರ್ಧಾರ ಮಾಡಿದಳು.

ಬಾಗಲಕೋಟೆಯಿಂದ ದೂರ ಬಳ್ಳಾರಿಯ ಕಡೆ ಬಂದು ಇಲ್ಲಿಗೆ ಬಂದು ಇದ್ದಳು. ಅವಳ ಬಾಣಂತನ ಆಯ್ತು. ಹೆಣ್ಣುಮಗು. 'ಸಂಪಕಾ' ಎಂದು ಹೆಸರಿಟ್ಟಳು. ತನ್ನ ರೀತಿ ಮಗಳು ಆಗುವುದು ಬೇಡ ಎಂದು ಶಾಲೆಗೆ ಸೇರಿಸಿ ದೂರದ ಊರಲ್ಲೇ ಬೆಳೆಸುತ್ತಿದ್ದಳು. ಹೀಗೆ ಒಂದು ದಿನ ಊರಿಗೆ ಹೋದರಾಯಿತು ಎಂದುಕೊಂಡು ಹೊರಟಳು. ಹೋದಾಗ ಅವಳಿಗೊಂದು ಆಘಾತ ಕಾದಿತ್ತು ಅವಳು ಪಂಚಾಯಿತಿಯ ತೀರ್ಮಾನ ಉಲ್ಲಂಘಿಸಿ, ರಾತ್ರಿಯೇ ಮನೆಬಿಟ್ಟು ಹೋಗಿರುವುದು. ಊರಿನ ಮರ್ಯಾದೆಗೆ ಧಕ್ಕೆ ತಂದಿದ್ದು, ಪಂಚಾಯಿತಿಗೆ ಅವಮಾನ ಮಾಡಿದಂಗೆ. ಅವಳು ಊರಿಗೆ ಬಂದರೂ, ಇರಲು ಯಾರೂ ಆಶ್ರಯ ಕೊಡುವಂತಿಲ್ಲ, ಅವಳೊಂದಿಗೆ ಮಾತೂ ಆಡುವಂತಿಲ್ಲ ಎಂದು ಊರಿಂದ ಬಹಿಷ್ಕಾರ ಹಾಕಿದ್ದರು. ಅವಳ ದೈನ್ಯತೆ ಕಣ್ಣಲ್ಲಿದ್ದರೂ ಯಾರೂ ಅರ್ಥ ಮಾಡಿಕೊಳ್ಳಲಿಲ್ಲ. ಸುಮ್ಮನೆ ಮರಳಿದಳು. ವೆಂಕಟಪ್ಪ ಗೌಡ ಮುಖ ನೋಡಲು ಆಗದೇ ಮುಖ ಕೆಳ ಹಾಕಿ ನಡೆದ.

'ಹೀಗೆ ಅವಳು ಆಶ್ರಯ ಅರಸಿ, ಇಲ್ಲಿಗೆ ಬಂದು ತನ್ನದೇ ಜೀವನ ಕಟ್ಟಿಕೊಂಡು ಬದುಕುತ್ತಿದ್ದಾಳೆ. ಮಗಳು ಈಗ ಡಿಗ್ರಿ ಓದುತ್ತಿದ್ದಾಳೆ. ಅವಳನ್ನು